ಅಸಲು ದಾವಾ ನಂ. 69/2024
ಪಿ ಡಬ್ಲ್ಯು-1

ದಿನಾಂಕ: 04-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು:- ಪ್ರತಿವಾದಿ ನಂ. **9** ರಿಂದ **11, 13, 15** ರಿಂದ **21, 23** ರಿಂದ **26, 28** ಪರ ಶ್ರೀ. ವಿ ಬಿ ಟಿ ವಕೀಲರಿಂದ.

ದಾವಾ ಆಸ್ತಿಗಳ ಸರ್ವೇ ನಂಬರ ಹೇಳಲು ಬರುವುದಿಲ್ಲ. ನಾನು ಎಷ್ಟು ಆಸ್ತಿಗಳ ಸಂಬಂಧ ಪರಿಹಾರ ಬೇಡಿ ದಾವೆ ಸಲ್ಲಿಸಿರುತ್ತೇನೆ ಎಂದು ಹೇಳಲು ಬರುವುದಿಲ್ಲ. ದಾವಾ ಆಸ್ತಿ ಪಂಚಾಯತಿ ನಂಬರ ಹೇಳಲು ಬರುತ್ತದೆಯೇ ಎಂದರೆ ನೆನಪಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಗುರುನಂಜಪ್ಪ ಇವರಿಗೆ ಒಟ್ಟು 8 ಜನ ಮಕ್ಕಳು ಇದ್ದರು. ಸದರಿ ಗುರುನಂಜಪ್ಪ ಇವರಿಗೆ ಆಸ್ತಿಗಳು ಹೇಗೆ ಬಂದಿರುತ್ತವೆ ಎಂಬ ಬಗ್ಗೆ ಮಾಹಿತಿ ಇಲ್ಲ. ಹಾಗೇ ಯಾವ ನಾತೆಯಿಂದ ಗುರುನಂಜಪ್ಪ ಇವರಿಗೆ ಆಸ್ತಿಗಳು ಬಂದಿರುತ್ತವೆ ಎಂದು ಗೊತ್ತಿಲ್ಲ. ಗುರುನಂಜಪ್ಪ ಮತ್ತು ಮಲ್ಲವ್ವ ಸಾಯುವಾಗ ಆಸ್ತಿಗಳನ್ನು ಯಾರಿಗೂ ಮಾಡಿಲ್ಲ. ನನ್ನ ಪ್ರಕಾರ ಗುರುನಂಜಪ್ಪ ಮತ್ತು ಮಲ್ಲವ್ವ ಸಾಯುವಾಗ ಆಸ್ತಿಗಳನ್ನು ಯಾರಿಗೂ ಮಾಡಿಲ್ಲ ಎಂಬುವುದಾಗಿರುತ್ತದೆ. ಗುರುನಂಜಪ್ಪ ಸಾಯುವಾಗ ಅವರ ಹೆಸರಿನಲ್ಲಿ ಆಸ್ತಿ ಬಿಟ್ಟು ಹೋಗಿದ್ದರು. ಹಾಗೇ ಯಾವ ಸರ್ವೇ ನಂಬರ ಆಸ್ತಿಗಳನ್ನು ಬಿಟ್ಟು ಹೋಗಿದ್ದರು ಎಂದು ಹೇಳಲು ಬರುವುದಿಲ್ಲ. ಈಗ ಚಾಲ್ತಿ ದಾವಾದ ಆಸ್ತಿಗಳ ಉತಾರಗಳಲ್ಲಿ ಯಾರ ಹೆಸರುಗಳು ಇರುತ್ತವೆ ಎಂದು ಹೇಳಲು ಬರುವುದಿಲ್ಲ. ಗುರುನಂಜಪ್ಪ ಇವರಿಗೆ ಒಟ್ಟು ಕುಟುಂಬದ ಆಸ್ತಿಗಳು ಎಷ್ಟು ಇದ್ದವು ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳ ಸರ್ವೇ ನಂಬರಗಳಲ್ಲಿ ಯಾರ ಹೆಸರು ಇರುತ್ತವೆ ಮತ್ತು ಅವುಗಳನ್ನು ಯಾರು ವಹಿವಾಟು ಮಾಡುತ್ತಾರೆ ಎಂದು ಹೇಳಲು ಬರುವುದಿಲ್ಲ. ಸಾಕ್ಷಿ ಮುಂದುವರೆದು ತಾನು ವಹಿವಾಟು ಮಾಡುವ ವಿಷಯ ಮಾತ್ರ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಹಾಗೇ ನಾನು ಯಾವ ಸರ್ವೇ ನಂಬರ ಆಸ್ತಿ ವಹಿವಾಟು ಮಾಡುತ್ತೇನೆ ಎಂದು ಹೇಳಲು ಬರುವುದಿಲ್ಲ. ನಾನು ವಹಿವಾಟು ಮಾಡುತ್ತಿರುವುದಾಗಿ ಹೇಳಿದ್ದು ಆ ಸರ್ವೇ ನಂಬರ ಪೂರ್ವಕ್ಕೆ ಯಾರ ಜಮೀನು ಇರುತ್ತದೆ ಎಂದರೆ ಸಾಕ್ಷಿ ಒಬ್ಬ ಮುಸ್ಲಿಂ ಜನರ ಆಸ್ತಿ ಇರುವುದಾಗಿ ನುಡಿಯುತ್ತಾರೆ. ಸಾಕ್ಷಿ ಹೆಸರು ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಆ ಸರ್ವೇ ನಂಬರ, ಕ್ಷೇತ್ರ, ನಂಬರ ನನಗೆ

ನೆನಪಿಲ್ಲ. ಅದೇ ರೀತಿ ಪಶ್ಚಿಮಕ್ಕೆ , ದಕ್ಷಿಣಕ್ಕೆ, ಉತ್ತರಕ್ಕೆ ಯಾರ ಜಮೀನು ಇರುತ್ತದೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸವಣೂರು ಮತ್ತು ತೆಗ್ಗಿನಹಳ್ಳಿ ಇವರ ಜಮೀನು ಇರುವುದಾಗಿ ನುಡಿಯುತ್ತಾರೆ. ಹಾಗೇ ಸವಣೂರು ಮತ್ತು ತೆಗ್ಗಿನಹಳ್ಳಿ ಜಮೀನಿನ ಸರ್ವೇ ನಂಬರ ಮತ್ತು ಅದರ ಕ್ಷೇತ್ರ ಹೇಳಲು ಬರುವುದಿಲ್ಲ ಎಂದರೆ ಸರಿ.

2. ನನ್ನ ಹೆಸರಿಗೆ ಮನೆಯ ಆಸ್ತಿ ಇರುತ್ತದೆ. ಅದು ನನ್ನ ಮತ್ತು ನನ್ನ ಮಗನ ಹೆಸರಿನಲ್ಲಿ ಇರುತ್ತದೆ, ಆದರೆ ಅದರ ನಂಬರ ಹೇಳಲು ಬರುವುದಿಲ್ಲ. ಸದರಿ ಮನೆ ಹಿರಿಯರಿಂದ ಬಂದ ಆಸ್ತಿ ಇರುತ್ತದೆ. ಈ ದಾವೆಯಲ್ಲಿ ಸದರಿ ಮನೆಯನ್ನು ದಾವಾ ಆಸ್ತಿ ಅಂತಾ ಸೇರ್ಪಡೆ ಮಾಡಿಲ್ಲ. ನನ್ನ ಸಹೋದರರು ಯಾವ ಸರ್ವೇ ನಂಬರ ಜಮೀನನ್ನು ಸಾಗುವಳಿ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-1 ರ ಪ್ರಕಾರ ಸರ್ವೇ ನಂಬರ 40/1 ಅ, ಕ್ಷೇತ್ರ 07 ಎಕರೆ 13 ಗುಂಟೆ ಜಮೀನು ಈ ದಾವೆ ಸಲ್ಲಿಸುವ ಸಂದರ್ಭದಲ್ಲಿ ಅಸ್ತಿತ್ವದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಅದು ನಮ್ಮ ತಾಯಿಯ ಹೆಸರಿನಲ್ಲಿ ಇರುವುದಾಗಿ ನುಡಿಯುತ್ತಾರೆ. ನಿಪಿ-2 ರ ಪ್ರಕಾರ ಸರ್ವೇ ನಂಬರ 41/2 ಬ/1 ಅ, ಕ್ಷೇತ್ರ 07 ಎಕರೆ 25 ಗುಂಟೆ ಜಮೀನು ಈ ದಾವೆ ಸಲ್ಲಿಸುವ ಸಂದರ್ಭದಲ್ಲಿ ಅಸ್ತಿತ್ವದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಅದು ನಮ್ಮ ತಾಯಿಯ ಹೆಸರಿನಲ್ಲಿ ಇರುವುದಾಗಿ ನುಡಿಯುತ್ತಾರೆ. ಸರ್ವೇ ನಂ.41/2 ಇದರ ಒಟ್ಟು ಕ್ಷೇತ್ರ ಎಷ್ಟು ಎಂದು ಹೇಳಲು ಬರುವುದಿಲ್ಲ. ಸದರಿ ಜಮೀನು ನನ್ನ ತಾಯಿಯ ಹೆಸರಿನಲ್ಲಿ ಇರುತ್ತದೆ. ಸದರಿ ಜಮೀನು ನನ್ನ ತಾಯಿಯ ಹೆಸರಿನಲ್ಲಿಯಾಗಲೀ, ನನ್ನ ಹೆಸರಿನಲ್ಲಿಯಾಗಲೀ ಇಲ್ಲ ಎಂದರೆ ಸರಿಯಲ್ಲ. ಸದರಿ ಜಮೀನು ಗುರುನಂಜಪ್ಪ ಇವರ ಗಂಡು ಮಕ್ಕಳ ಹೆಸರಿನಲ್ಲಿ ಮಾತ್ರ ಇರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂ.33/8 ಇದು ನನ್ನ ತಾಯಿಯ ಹೆಸರಿನಲ್ಲಿ ಇರುತ್ತದೆ. ಸದರಿ ಜಮೀನು ಅವರಿಗೆ ಯಾವ ನಾತೆಯಿಂದ ಬಂದಿರುತ್ತದೆ ಎಂದು ಗೊತ್ತಿಲ್ಲ. ಸರ್ವೇ ನಂ.33/9 ಇದು ನನ್ನ ತಾಯಿಯ ಹೆಸರಿನಲ್ಲಿ ಇರುತ್ತದೆ. ಸರ್ವೇ ನಂ. 33/8 ಮತ್ತು 33/9 ಇದರ ಪಹಣಿಯಲ್ಲಿ ಯಾರ ಹೆಸರುಗಳು ಇರುತ್ತವೆಯೋ ಅವರೇ ಅದರ ಸಾಗುವಳಿ ಮಾಡುತ್ತಾರೆ ಎಂದರೆ ಸರಿಯಲ್ಲ. ಸರ್ವೇ ನಂ.33/9 ಜಮೀನನ್ನು ಪ್ರತಿವಾದಿ ನಂ.31 ಸಾಗುವಳಿ ಮಾಡುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಶಿವಮೂರ್ತೆಪ್ಪ ಮತ್ತು

ಚನ್ನಬಸಪ್ಪ ಇವರ ಹೆಸರಿನಲ್ಲಿ ಎಷ್ಟು ಜಮೀನು ಇರುತ್ತವೆ ಎಂಬ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿ. ನಾನು ಇಲ್ಲಿಯವರೆಗೂ ಬಹಳ ದಾವೆಗಳನ್ನು ಸಲ್ಲಿಸುತ್ತಾ ಬಂದಿರುತ್ತೇನೆ. ನಾನು ಹಾವೇರಿ, ಸವಣೂರ ನ್ಯಾಯಾಲಯಗಳಲ್ಲಿ ದಾವೆ ಸಲ್ಲಿಸಿದ್ದು ಇತ್ತು.

3. ಮೃತ ಮಲ್ಲವ್ವ ಗಂಡ ಗುರುನಂಜಪ್ಪ ಕಳ್ಳಿಮನಿ ನನ್ನ ತಾಯಿ ಇರುತ್ತಾರೆ. ನನ್ನ ತಾಯಿ ಜೀವಿತ ಇರುವಾಗ ಆಕೆಯ ಗಂಡ ಗುರುನಂಜಪ್ಪ ಇವರಿಗೆ ಎಷ್ಟು ಆಸ್ತಿಗಳು ಇದ್ದವು ಅಷ್ಟರ ಸಂಬಂಧ ಮಾತ್ರ ದಾವೆ ಸಲ್ಲಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಸರ್ಕಾರಿ ಜಮೀನುಗಳ ಸಂಬಂಧ ಮಾತ್ರ ದಾವೆ ಮಾಡಿರುವುದಾಗಿ ನುಡಿಯುತ್ತಾರೆ. ಸದರಿ ಆಸ್ತಿಯ ಸರ್ವೇ ನಂ.40/1 ಎ ಎಂದರೆ ಸರಿ. ಸದರಿ ಸರ್ವೇ ನಂಬರ ಈಗ ಚಾಲ್ತಿಯಲ್ಲಿ ಏನು ಬದಲಾವಣೆ ಹೊಂದಿರುತ್ತದೆ ಎಂಬ ಬಗ್ಗೆ ಮಾಹಿತಿ ಇಲ್ಲ. ಸದರಿ ಸರ್ವೇ ನಂಬರ ಈಗ 40/ ಎ ಎಂಬುವುದಾಗಿ ಬದಲಾವಣೆ ಹೊಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಅವರು ಬದಲಾವಣೆ ಮಾಡಿದ ಸಂಗತಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ದಾವೆ ಸಲ್ಲಿಸುವ ಸಂದರ್ಭದಲ್ಲಿಯೇ ಸದರಿ ಸರ್ವೇ ನಂಬರ 40/ಎ ಎಂಬುವುದಾಗಿ ಬದಲಾವಣೆ ಆದ ಸಂಗತಿ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಸದರಿ ಸರ್ವೇ ನಂಬರ ಕುರಿತು 1983 ರಲ್ಲಿ ನನ್ನ ತಾಯಿ ಹಾವೇರಿ ನ್ಯಾಯಾಲಯದಲ್ಲಿ ಅಸಲು ದಾವಾ ನಂ.62/1983 ಅಂತಾ ನಿಪಿ-9 ರಂತೆ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸರ್ವೇ ನಂ.41/2 ಬ/1 ಎ ಸರ್ವೇ ನಂಬರ ಈಗ ಚಾಲ್ತಿಯಲ್ಲಿ ಇಲ್ಲ, ಅದು ಬದಲಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂ.41/2 ಎ ದಲ್ಲಿ 02 ಎಕರೆ 23 ಗುಂಟೆ ಜಮೀನು ಮಲ್ಲೇಶಪ್ಪ ಇವರ ಹಿಸ್ಸೇಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ 01 ಎಕರೆ 20 ಗುಂಟೆ ಮಾತ್ರ ಸಾಗುವಳಿ ಮಾಡುತ್ತಾ ಬಂದಿರುವುದಾಗಿ ನುಡಿಯುತ್ತಾರೆ. ಮಲ್ಲೇಶಪ್ಪ ತೀರಿಕೊಂಡ ನಂತರ ಅವನ ವಾರಸುದಾರರಾದ ಹೆಂಡತಿ, ಮಕ್ಕಳು ಸದರಿ ಜಮೀನನ್ನು ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ. ಸರ್ವೇ ನಂ.41/6 ಕ್ಷೇತ್ರ 02 ಎಕರೆ 21 ಗುಂಟೆ ಜಮೀನನ್ನು ಚನ್ನಬಸಪ್ಪ ಇವರ ಹಿಸ್ಸೇಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ 01 ಎಕರೆ 20 ಗುಂಟೆ ಜಮೀನನ್ನು ಸಾಗುವಳಿ ಮಾಡುತ್ತಿರುವುದಾಗಿ ನುಡಿಯುತ್ತಾರೆ. ಸರ್ವೇ ನಂ.41/6 ರಲ್ಲಿ 02 ಎಕರೆ 32 ಗುಂಟೆ ಜಮೀನನ್ನು ಯಲ್ಲನಗೌಡ ಇವರು ವಹಿವಾಟು ಮಾಡುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಅವರು ದತ್ತು ಪ್ರಕಾರ ಖರೀದಿ ಮಾಡಿಕೊಂಡಿರುವುದಾಗಿ ಸ್ವತಃ

ನುಡಿಯುತ್ತಾರೆ. ಆಲನಗೌಡ ಇವರಿಗೆ ಸರ್ವೆ ನಂ.41/6 ರಲ್ಲಿ 02 ಎಕರೆ 32 ಗುಂಟೆ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಗುರುನಂಜಪ್ಪ ಇವರ ಮಕ್ಕಳು ಯಾವಾಗ ವಾಟ್ನಿ ಮಾಡಿಕೊಂಡಿರುತ್ತಾರೆ ಎಂದು ಗೊತ್ತಿಲ್ಲ. ಹಾಗೇ ಪಾಲು ಆಗಿಲ್ಲ ಅವರ ಹೆಸರಿನಲ್ಲಿಯೇ ಜಮೀನು ಇತ್ತು ಎಂದು ಸ್ವತಃ ನುಡಿಯುತ್ತಾರೆ. 2000 ನೇ ಸಾಲಿನಲ್ಲಿ ಮೌಖಿಕ ಪಾಲು ಆಗಿ ಬೇರೆ ಬೇರೆ ವಹಿವಾಟು ಆಗಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ.41/4 ಜಮೀನು ಯಾರ ಹೆಸರಿನಲ್ಲಿ ಮತ್ತು ಅದರ ಕ್ಷೇತ್ರ ಎಷ್ಟು ಎಂದು ಹೇಳಲು ಬರುವುದಿಲ್ಲ. ಸಾಕ್ಷಿ ಅದು ನಮ್ಮ ತಂದೆಯ ಹೆಸರಿಲ್ಲಿ ಇರುವುದಾಗಿ ನುಡಿಯುತ್ತಾರೆ. ಸರ್ವೆ ನಂ.41/4 ರಲ್ಲಿಯ 01 ಎಕರೆ 12 ಗುಂಟೆ ಪ್ರಭು ಕಳ್ಳಿಮನಿ ಇವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ.41/6 ಶಿವಕುಮಾರ ಕಳ್ಳಿಮನಿ ಇವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ.41 ಜಮೀನನ್ನು ಗುರುನಂಜಪ್ಪ ಇವರ ಗಂಡು ಮಕ್ಕಳಿಗೆ ಭೂ ನ್ಯಾಯ ಮಂಡಳಿಯವರು ರೈತಾಪಿ ಹಕ್ಕು ಮಂಜೂರು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮಹಾಲಿಂಗಪ್ಪ ಇವರ ಹೆಸರಿಗೆ ಯಾವ ಆಸ್ತಿ ಇರುತ್ತದೆ ಎಂಬ ಬಗ್ಗೆ ಮಾಹಿತಿ ಇಲ್ಲ. ಅವರ ಹೆಸರಿಗೆ ಸರ್ವೆ ನಂ.30/8 ರಲ್ಲಿ 01 ಎಕರೆ 07 ಗುಂಟೆ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನು ಸಹ ಭೂ ನ್ಯಾಯ ಮಂಡಳಿಯವರು ರೈತಾಪಿ ಹಕ್ಕು ಮಂಜೂರು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದು ನನ್ನ ತಂದೆಯ ಆಸ್ತಿ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ಸರ್ವೆ ನಂ.33/1 ಕ್ಷೇತ್ರ 01 ಎಕರೆ 07 ಗುಂಟೆ ಜಮೀನು 31 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಯಾವ ಆಸ್ತಿಗಳನ್ನು ಯಾರು ಯಾವ ಉದ್ದೇಶಕ್ಕಾಗಿ ಯಾರಿಗೆ ಮಾರಿದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಸರ್ವೆ ನಂ.33/10 ಕ್ಷೇತ್ರ 01 ಎಕರೆ 07 ಗುಂಟೆ ಜಮೀನು ಶಿವಮೂರ್ತೆಪ್ಪ ಕಳ್ಳಿಮನಿ ಇವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಆದ ಹೆಸರು ಬದಲಾವಣೆ ಪ್ರಶ್ನಿಸಿ ನಾನು ಕಂದಾಯ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿಲ್ಲ. ನಾನು ಆಧರಿಸುವ ದಾವಾ ಆಸ್ತಿಗಳ ಉತಾರೆ ನಿಪಿ-1 ರಿಂದ 3 ಇವು ನಾನು ದಾವೆ ಸಲ್ಲಿಸುವಾಗ ಅಸ್ತಿತ್ವದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು 2018-19 ರ ಹಳೆಯ ಪಹಣಿಗಳನ್ನು ಆಧರಿಸಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಸಲ್ಲಿಸಿದ ಈ ಹಿಂದಿನ ದಾವೆಯಲ್ಲಿ ನಮೂದಿಸಿದ ಒಂದು ಸರ್ವೆ ನಂಬರ ಮಾತ್ರಕ್ಕೆ ಎಲ್ಲರೂ ಹಕ್ಕುದಾರರು ಎಂದರೆ

ಸರಿಯಲ್ಲ.  ನನ್ನ ತಾಯಿ ಈ ಹಿಂದೆ ಸಲ್ಲಿಸಿದ  ದಾವೆಯಲ್ಲಿಯ 3 ಪ್ರತಿವಾದಿಯರು ಮತ್ತು ನನ್ನ ತಾಯಿ  ಮಾತ್ರ  ಆ ಆಸ್ತಿಗೆ ಹಕ್ಕುದಾರರು ಎಂದರೆ ಸರಿಯಲ್ಲ.  ಗುರುನಂಜಪ್ಪ ಇವರಿಗೆ ಯಾವ ಜಮೀನು ಮನೆಯ ಆಸ್ತಿ ಬಂದಿದ್ದವು ಎಂದು ನನಗೆ  ಹೇಳಲು ಬರುವುದಿಲ್ಲ. ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ನಂ.152/2017  ಅಂತಾ ದಾವೆ ಸಲ್ಲಿಸಿದ್ದೆ  ಎಂದರೆ ಸರಿ. ನಾನು ಹೀಗೆ  ಒಂದಿಲ್ಲೊಂದು ಖೊಟ್ಟಿ ವ್ಯಾಜ್ಯ ಕಾರಣ ತೋರಿಸಿ ದಾವೆ ಸಲ್ಲಿಸುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ.  ನಾನು ಸಲ್ಲಿಸಿದ  ಆಸ್ತಿ  ಉತಾರೆಗಳಲ್ಲಿ ಇರುವ ಹೆಸರಿನವರು ಅವುಗಳ  ವಹಿವಾಟು ಮಾಡುತ್ತಾ ಬಂದಿರುತ್ತಾರೆ  ಎಂದರೆ ಸರಿಯಲ್ಲ. ಅಸಲು ದಾವಾ ನಂ.152/2017 ವಜಾ ಆದ ನಂತರ  ಆಸ್ತಿಗಳನ್ನು ಎಲ್ಲರೂ ಸಾಗುವಳಿ ಮಾಡುತ್ತಾ ಬಂದಿರುತ್ತೇವೆ. ಹಾಗೇ ಆಸ್ತಿಗಳು  ಯಾವ ಮೂಲಗಳಿಂದ ಬಂದಿರುತ್ತವೆ  ಎಂಬ  ಬಗ್ಗೆ  ನನಗೆ ಮಾಹಿತಿ ಇಲ್ಲ ಎಂದರೆ ಸರಿ.

4.   ಅಸಲು ದಾವಾ ನಂ.62/1983 ರಲ್ಲಿ  ನನ್ನ ತಾಯಿ ಮತ್ತು ಸಹೋದರರಿಗೆ ಬಂದ ಆಸ್ತಿಗಳಿಗೆ ಮಾತ್ರ  ನನಗೆ  ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.  ಈ ದಾವೆಯ ಬಾಕಿ ಆಸ್ತಿಗಳು ಸ್ವಯಾರ್ಜಿತ ಆಸ್ತಿಗಳು ಇರುವುದರಿಂದ  ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.  ಸದರಿ ಆಸ್ತಿಗಳ  ಸಂಬಂಧ  ಯಾವ ನ್ಯಾಯಾಲಯಗಳಲ್ಲಿ ಎಷ್ಟು ದಾವೆಗಳು ವಿಚಾರಣೆಯಲ್ಲಿ ಇರುತ್ತವೆ ಎಂಬ ಬಗ್ಗೆ ಮಾಹಿತಿ ಇಲ್ಲ. ನ್ಯಾಯಾಲಯಗಳಲ್ಲಿ  3 ರಿಂದ 4 ಪ್ರಕರಣಗಳು  ವಿಚಾರಣೆಯಲ್ಲಿ ಇರುತ್ತವೆ  ಎಂದರೆ ಸರಿಯಲ್ಲ.  ಅಸಲು ದಾವಾ ನಂ.152/2017 ವಜಾ ಆಗಿದ್ದರಿಂದ ಪ್ರತಿವಾದಿಯರ ಮೇಲೆ ಸಿಟ್ಟು ಮಾಡಿಕೊಂಡು ಅವರಿಗೆ ತೊಂದರೆ ನೀಡುವ ಉದ್ದೇಶದಿಂದ ಈ ಖೊಟ್ಟಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿ  ಯಾವುದೇ ಕಾಗದ ಪತ್ರ  ಮಾಡದೇ  ಆಸ್ತಿ  ವಿಲೇವಾರಿ ಮಾಡದೇ ಮರಣ ಹೊಂದಿರುತ್ತಾರೆ  ಎಂದರೆ ಸರಿಯಲ್ಲ.  ಸಾಕ್ಷಿ  ನನ್ನ ತಾಯಿ ಮೃತ್ಯುಪತ್ರ ಮಾಡಿ ಇಟ್ಟು ತೀರಿಕೊಂಡಿರುವುದಾಗಿ ಸ್ವತಃ ನುಡಿಯುತ್ತಾರೆ. ಹಾಗೇ  ಮೃತ್ಯುಪತ್ರ ಮಾಡಿ ಇಟ್ಟಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಸಲು ದಾವಾ ನಂ. 69/2024
ಪಿ ಡಬ್ಲ್ಯು-1

<u>ಪಾಟೀಸವಾಲು: ಪ್ರತಿವಾದಿ ನಂ.**31** ರವರ ಪರ ಶ್ರೀ. ಸಿಬಿಪಿ ವಕೀಲರಿಂದ.</u>

ಸರ್ವೇ ನಂ.33/9 ಇದು ಪುಟ್ಟಪ್ಪನಿಂದ ಬಸಪ್ಪ ಇವರಿಗೆ ನಂತರ ಬಸಪ್ಪನಿಂದ ಮಹಾದೇವಪ್ಪನವರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಹಾಗೇ ಮಹಾದೇವಪ್ಪನವರು ತಮ್ಮ ಹೆಸರನ್ನು ಪಹಣಿಯಲ್ಲಿ ಹಚ್ಚಿಕೊಂಡು ಬ್ಯಾಂಕಿನಿಂದ ಸಾಲ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಇನ್ನುಳಿದಂತೆ ಪ್ರತಿವಾದಿ ನಂ. 9 ರಿಂದ 11, 13, 15 ರಿಂದ 21, 23 ರಿಂದ 26, 28 ಇವರ ಪಾಟೀ ಸವಾಲನ್ನು ಪ್ರತಿವಾದಿ ನಂ.31 ರವರು ಅಳವಡಿಸಿಕೊಳ್ಳುತ್ತಾರೆ.

ಮರುವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳ: ಸವಣೂರ).